ರೀತಿಯಲ್ಲಿ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡುತ್ತೇನೆ. ಇವರು ಕಂಟ್ರಾಕ್ಟ್ ವರ್ಕ್ಸ್ ಅಲ್ಲವೆಂದು ಪ್ರೂವ್ ಮಾಡಬೇಕು. ಅದನ್ನು ಪ್ರೂವ್ ಮಾಡಿದರೆ ಬೇರೆ ಕೆಲಸಗಾರರನ್ನು ಹೇಗೆ ಪರಿಗಣಿಸುತ್ತಾರೆ ಹಾಗೆಯೇ ಇವರನ್ನು ಪರಿಗಣಿಸಬೇಕೆಂದು ಸೂಕ್ತವಾದ ಆದೇಶ ಕೊಡುತ್ತೇನೆ.

ಶ್ರೀ ಕೆ. ಕುಶಾಲ.—ಅಲ್ಲಿ ಮುಷ್ಕರವನ್ನು ತಡೆಹಿಡಿಯಬೇಕು. ಸ್ಟ್ರೈಕನ್ನು ಬ್ಯಾನ್ ಮಾಡಬೇಕು. ಸರ್ಕಾರವು ಮಧ್ಯೆ ಪ್ರವೇಶಿಸಿ ಈ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕು.

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಮುಗಿಯಿತು. ಈಗ ನಿಯಮ ೩೩೪ರ ಪ್ರಕಾರ ಶ್ರೀಮತಿ ಮನೋರಮಾ ಮಧ್ವರಾಜ್‌ರವರ ವಿಷಯವನ್ನು ಪ್ರಸ್ತಾಪಿಸಬೇಕು.

ನಿಯಮ ೩೩೪ರ ಮೇರೆಗೆ

೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐಸ್‌ಪ್ಲಾಂಟ್‌ಗಳಿಂದ ಆಗುವ ವಿದ್ಯುತ್ ಕಳವನ್ನು ತಪ್ಪಿಸಲು ಒತ್ತಾಯ.

† ಶ್ರೀಮತಿ ಮನೋರಮಾ ಮಧ್ವರಾಜ್.—(ಉಡುಪಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕದ ನಿಗಮ ಮಂಡಳಿಗಳೆಲ್ಲವೂ ಆಭೂತ ಪೂರ್ವ ನಷ್ಟದ ಸಾಧನೆಗೆ ಹೆಸರಾದುದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ. ಇದಕ್ಕೆ ಕಾರಣ ಹಲವಾರು ಕಳಪೆ ಗುಣಮಟ್ಟದ ಉಪಕರಣಗಳ ಬಳಕೆಯಿಂದ ವಿದ್ಯುತ್ ಸೋರಿಕೆ. ತನ್ನ ಜವಾಬ್ದಾರಿಯನ್ನರಿತು ಕೆಲಸ ಮಾಡಲು ವಿಫಲರಾದ ಅಥವಾ ಎಂಜಲಿನ ದಾಸರಾದ ಅಧಿಕಾರಿಗಳ ಅಸಮರ್ಪಕ ಮೇಲ್ವಿಚಾರಣೆ ನಷ್ಟದ ಮೂಲ ಕಂಡುಹಿಡಿಯಲು ವೈಫಲ್ಯ. ಈ ಕುರಿತು ಕೂಡಾ ಅಧಿಕಾರಿಗಳ ಔದಾಸೀನ್ಯ ಹುಟ್ಟಿಸುವಂತಿದೆ ಪ್ರಾಮಾಣಿಕ ವ್ಯವಹಾರ ಸ್ಥಿತಿಗೆ ಆಡಳಿತೆಯಲ್ಲಿ ನಂಬಿಕೆ ತಪ್ಪುವಂತಾಗಿದೆ. ಆದ್ದರಿಂದ ವಿದ್ಯುತ್ ಪೋಲಾಗುವುದನ್ನು ತಪ್ಪಿಸಲು ಉನ್ನತ ಮಟ್ಟದ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಲು ಆಗದಂಥ Fool Proof...ಮೀಟರುಗಳನ್ನು ಬಳಸಬೇಕು. ಇಲಾಖೆಯವರೇ ಮೀಟರಿನ ಸೀಲು ಒಡೆದು ಅವ್ಯವಹಾರದಲ್ಲಿ ಶಾಮೀಲಾಗುವ ಕುರಿತು ಸೂಕ್ತ ತನಿಖೆ ನಡೆಸಬೇಕು. ಕರ್ನಾಟಕ ಮೀನಂಗಾರಿಕಾ ಅಭಿವೃದ್ಧಿ ನಿಗಮ, ಮಂಗಳೂರು ಮತ್ತು ಮಲ್ಪೆಯ ಸರಕಾರಿ ಮಾಲ್ಜುಗಡ್ಡೆ ಉತ್ಪಾದನಾ ಘಟಕಗಳ ಉತ್ಪಾದನೆ ವಿದ್ಯುತ್ ಬಿಲ್ಲುಗಳನ್ನು ಖಾಸಗೀ ಘಟಕಗಳ ಉತ್ಪಾದನೆ ಬಿಲ್ಲುಗಳೊಂದಿಗೆ ಹೋಲಿಸಿ ನೋಡಿ, ವಂಚಿಸುವ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ. ಸೂಕ್ತ ಕ್ರಮ ಕೈಗೊಳ್ಳಬೇಕು. ಬೇಲಿಯೇ ಹೊಲ ಮೇಯುವಂಥ ಕರೆಂಟು ಕಳವಿಗೆ ಶಾಮಿಲಾಗಿರುವ ಲಂಚಕೋರ ಸಿಬ್ಬಂದಿಗಳ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು. ಹಗಲಿನಹೊತ್ತು ಪ್ರವಾಸ ಕಾರ್ಯಕ್ರಮ ರೂಪಿಸಿ, ಮೋಟೀಸ್ ಕೊಟ್ಟು ತನಿಖೆಯೆಂಬ ನಾಟಕವನ್ನು ತನಿಖಾ ದಳದವರು ಮಾಡುವುದು ತಪ್ಪಬೇಕು ಯಾವುದೇ ಮುನ್ಸೂಚನೆಯಿಲ್ಲದೆ ಸಂಚಾರಿ ತನಿಖಾದಳಗಳು ಹಾಗೂ ಇಲಾಖೆಯ ಮೇಲಾಧಿಕಾರಿಗಳು ರಾತ್ರಿ ಸಮಯದಲ್ಲಿ ಹಠಾತ್ತಾಗಿ ಮಂಜುಗಡ್ಡೆ ಘಟಕಗಳನ್ನು ಪರಿಶೀಲಿಸಬೇಕು ಮತ್ತು ತಪ್ಪಿತಸ್ಥರಿಗೆ ಉಗ್ರದಂಡ ವಿಧಿಸಬೇಕು. ಅಧಿಕಾರಿಗಳ ಜೀಪು ಬಂದಾಗ ಘಟಕಗಳನ್ನು ಮುಚ್ಚಿ "ಕೆಲಸ ಮಾಡುತ್ತಿಲ್ಲ" ಎಂದು ಕೇಳುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮಕೈಕೊಳ್ಳಬೇಕು. ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಲಾಗದ ಹಿಂದಕ್ಕೆ ತಿರುಗಿಸಲಾಗದ ಮೀಟರುಗಳನ್ನು ದಕ್ಷಿಣ ಕನ್ನಡದಲ್ಲಿ ಮೊದಲು ಐಸ್‌ಪ್ಲಾಂಟ್‌ಗಳಿಗೆ ಒದಗಿಸಬೇಕು. ನಿರ್ದಾಕ್ಷಿಣ್ಯವಾದ ಪ್ರಾಮಾಣಿಕವಾದ ಕ್ರಮದಿಂದ ಅವ್ಯವಹಾರ ತಪ್ಪಿಸಬೇಕು. ಯೋಗ್ಯರಿಗೆ ಆರ್ಥಿಕ ನಷ್ಟವಾಗದಂತೆ ಮೋಸಗಾರರಿಗೆ ಅನುಕೂಲವಾಗದಂತೆ ಧೃಷ್ಟರಿಗೆ ಬೇಟವಿನ ತಾಣವಾಗದಂತೆ ನೋಡಿಕೊಂಡು ಸದ್ವರ್ತನೆಯ ಪ್ರಮಾಣಿಕ ಉದ್ದಿಮೇದಾರರು ಬದುಕುವಂತಾಗಬೇಕು. ತತ್ವರಿಣಾಮವಾಗಿ ಕೆ. ಇ. ಬಿ. ಯ ಸ್ಥಿತಿ ಉತ್ತಮವಾಗಬೇಕು. ಉತ್ತಮವಾಗುವ ಸಲುವಾಗಿ ಸ್ವಲ್ಪ ಚಿಂತನೆಯನ್ನಾದರೂ ಮಾಡಿ ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುಚ್ಛಕ್ತಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ಶ್ರೀಮತಿ ಮನೋರಮಾ ಮಧ್ವರಾಜ್ ಅವರ ಈ ಸಿಳಿತ ಪ್ರಸ್ತಾಪಕ್ಕೆ ಈ ಉತ್ತರ

ವನ್ನು ಕೊಡಬಯಸುತ್ತೇನೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಸಾರ್ವಜನಿಕರ ದೂರುಗಳನ್ನು ವಿದ್ಯುಚ್ಛಕ್ತಿಯ ಕಳವು ಮುಂತಾದ ಅಕ್ರಮಗಳ ನಿವಾರಣೆಯನ್ನು ತೀವ್ರಗತಿಯಲ್ಲಿ ಕೈಗೊಳ್ಳಲು ಜಾಗೃತದಳವನ್ನು (ಟೆಕ್ನಿಕಲ್ ಆಡಿಟ್‌ಸೆಲ್) ೧೯೮೫ರಲಿ ರಚಿಸಿ ಇದರಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ನೇಮಿಸಲಾಗಿದೆ.

೧ ಮುಖ್ಯ ಇಂಜನಿಯರ್ ೧

೨ ಸೂಪರಿಂಟೆಂಡೆಂಟ್ ಇಂಜಿನಿಯರ್ ೨

೩ ಅಧೀಕ್ಷಕ ಇಂಜಿನಿಯರ್ ೨

ಈಗಾಗಲೇ ಬೆಂಗಳೂರು, ಹುಬ್ಬಳ್ಳಿ, ದಾವಣಗೆರೆ, ಹೊಸಕೋಟಿ, ಬೆಳಗಾವಿ ಮುಂತಾದ ಕಡೆಗಳಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಗಳ ಮೇಲೆ ಆಕ್ರಮಣಗಳನ್ನು ಪತ್ತೆಹಚ್ಚಿ ಅವುಗಳ ಮೇಲೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.ವಿವರಗಳು ಈ ಕೆಳಕಂಡಂತಿವೆ.

ವರ್ಷ	ತನಿಖೆ ಮಾಡಿದ ಸ್ಥಾವರಗಳ ಸಂಖ್ಯೆ	ಅಪರಾಧಗಳನ್ನು ಗುರುತಿಸಿರುವ ಪ್ರಕರಣಗಳ ಸಂಖ್ಯೆ	ವಸೂಲಿಗಾಗಿ ಸೂಚಿಸಿರುವ ಹಣದ ಮೊತ್ತ (ಲಕ್ಷಗಳಲ್ಲಿ)
೧	೨	೩	೪
೧೯೮೫-೮೬	೭೦,೧೮೮	೧೪೩ (ಕಗ್ನಿಸಬಲ್) ೫೪೯೩ (ನಾನ್‌ಕಗ್ನಿಸಬಲ್) ೩೦ (ಶಿಕ್ಷೆಗೆ ಒಳಪಟ್ಟ ಪ್ರಕರಣ) ೮೧ (ವಿಮುಕ್ತವಾದವುಗಳು)	೧೭.೨೮ ೧೪೧.೫೪
೧೯೮೬-೮೭	೫೬,೧೭೬	೧೨೨ (ಕಗ್ನಿಸಬಲ್) ೪೦೭೧ (ನಾನ್‌ಕಗ್ನಿಸಬಲ್) ೧೮ (ಶಿಕ್ಷೆಗೆ ಒಳಪಟ್ಟವು) ೩೦ (ವಿಮುಕ್ತವಾದವು)	೧೦೬.೮೯ ೧೫೧.೩೧
೧೯೮೭-೮೮	೨೨,೫೪೬	೧೧೪ (ಕಗ್ನಿಸಬಲ್) ೩೦೬೦ (ನಾನ್‌ಕಗ್ನಿಸಬಲ್) ೧೨ (ಶಿಕ್ಷೆಗೆ ಒಳಪಟ್ಟವು) ೩೮ (ವಿಮುಕ್ತವಾದವು)	೨೫.೬೫ ೨೫೯.೪೭

ಖಾಸಗೀ ಮತ್ತು ಸಹಕಾರ ಸಂಘಗಳು ನಡೆಸುವ ಮಂಜುಗಡ್ಡೆ ತಯಾರಿಕೆ ಘಟಕಗಳ ವಿದ್ಯುತ್ ಬಿಲ್ಲುಗಳಲ್ಲಿ ವ್ಯತ್ಯಾಸವಿದೆಯೆಂದು ಮಾನ್ಯ ಶಾಸಕಿಯವರು ತಿಳಿಸಿದ್ದಾರೆ. ಇದರ ಬಗ್ಗೆ ತೀವ್ರ ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಸಿಬ್ಬಂದಿ ವರ್ಗದವರು ಶಾಮೀಲಾಗಿರುವುದು ಕಂಡುಬಂದರೆ ಅವರ ಮೇಲೆ ಉಗ್ರಕ್ರಮ ತೆಗೆದು ಕೊಳ್ಳುತ್ತೇವೆ.

ಕಳ್ಳತನ ದುರುಪಯೋಗದ ಬಗ್ಗೆ ಸುಳಿವು ನೀಡಿದವರಿಗೆ ಸೂಕ್ತ ಬಹುಮಾನ ನೀಡುವ ಯೋಜನೆ ಜಾರಿಯಲ್ಲಿರುತ್ತದೆ. ಸಂಶಯಾತ್ಮಕ ಪ್ರಕರಣಗಳಲ್ಲಿ ಪ್ಲಾಸ್ಟಿಕ್ ಸೀಲ್‌ಗಳನ್ನು ಹಾಕಲಾಗುವುದು. ವಿದ್ಯುತ್ ಕದಿಯಲು ಸಾಧ್ಯವಾಗದಂತೆ ಹಾಗೂ ಹಸ್ತಕ್ಷೇಪ ಮಾಡಲಾಗದಂತೆ ಎಲೆಕ್ಟ್ರಾನಿಕ್ ವೋಟರ್‌ಗಳನ್ನು ಹಾಕಲು ಪರಿಶೀಲಿಸಲಾಗುತ್ತಿದ್ದು, ಮೊದಲು ಈ ಭಾಗದಲ್ಲಿ ಈ ಉಪಕರಣವನ್ನು ಅಳವಡಿಸಲಾಗುವುದು.